

بِسۡمِ اللّٰہِ الرَّحۡمٰنِ الرَّحِیۡمِ

# ಸಾಹಿಬ್‌ಝಾದ ಮಿರ್ಝಾ ಅನಸ್ ಅಹ್ಮದ್ ಸಾಹೇಬ್ ಅವರ ಸ್ಮರಣೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 21-12-2018 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಮಿರ್ಝಾ ಅನಸ್ ಅಹ್ಮದ್ ಸಾಹಿಬ್, ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್ ರಹಿಮಹುಲ್ಲಾಹು ತಆಲಾರವರ ಹಿರಿಯ ಪುತ್ರ, ಅವರು ತನ್ನ 81ನೇ ವರ್ಷ ಪ್ರಾಯದಲ್ಲಿ ಕೆಲವು ದಿನಗಳ ಹಿಂದೆ ರಬ್‌ವದಲ್ಲಿ ನಿಧನ ಹೊಂದಿದರು– **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್**. ಅವರು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರ ಎಲ್ಲರಿಗಿಂತ ಹಿರಿಯ ಮೊಮ್ಮಗನಾಗಿದ್ದರು. ಹಝ್ರತ್ ನವಾಬ್ ಮುಬಾರಕ ಬೇಗಮ್ ಸಾಹಿಬ ಮತ್ತು ನವಾಬ್ ಮುಹಮ್ಮದ್ ಅಲಿ ಖಾನ್ ಸಾಹೇಬರ ಪುತ್ರಿಯ ಮಗನೂ ಆಗಿದ್ದರು. ಈ ರೀತಿ ಅವರು ನನ್ನ ಸೋದರ ಮಾವನ ಪುತ್ರನಾದ ಸಹೋದರನೂ ಆಗಿದ್ದರು. ಅವರು ಪ್ರಾಥಮಿಕ ಶಿಕ್ಷಣ ಖಾದಿಯಾನ್‌ನಲ್ಲಿ ಗಳಿಸಿದರು. ಅನಂತರ ರಬ್ವದಲ್ಲಿ ವಿದ್ಯಾಭ್ಯಾಸ ಮುಂದುವರಿಸಿ ಪಂಜಾಬ್ ಯುನಿವರ್ಸಿಟಿಯಿಂದ ಎಂ.ಎ. ಬಿರುದು ಪಡೆದರು. ಅವರು ಸ್ವಲ್ಪ ಕಾಲ ರಬ್ವದ ಕಾಲೇಜಿನಲ್ಲಿ ಸೇವೆ ಸಲ್ಲಿಸಿ ಅನಂತರ ಇಂಗ್ಲೆಂಡಿನ ಆಕ್ಸ್‌ಫರ್ಡ್ ಯುನಿವರ್ಸಿಟಿಯಿಂದಲೂ ಎಂ.ಎ. ಬಿರುದು ಗಳಿಸಿದರು. 1955ರಲ್ಲಿ ಅವರು ಝಿಂದಗಿ ವಕ್ಫ್ ಮಾಡಿದರು. 1962ರಲ್ಲಿ ಅವರು ಹುದ್ದೇದಾರರಾಗಿ ಬಹಳ ಕಷ್ಟಪಟ್ಟು ವಿವಿಧ ವಿಭಾಗಗಳಲ್ಲಿ ಕೆಲಸ ಮಾಡಿದರು. ಅವರು ಬಹಳ ಉತ್ಸಾಹದಿಂದಲೂ ಧೈರ್ಯದಿಂದಲೂ ಕಷ್ಟಪಟ್ಟೂ ಕೆಲಸ ಮಾಡುವವರಾಗಿದ್ದರು. ಹದೀಸ್, ಫಿಲಸಫಿ ಮತ್ತು ಇಂಗ್ಲಿಷ್ ಸಾಹಿತ್ಯ ಬಗ್ಗೆ ಅವರು ಗಾಢವಾಗಿ ಅಧ್ಯಯನ ಮಾಡಿದ್ದರು. ಅವರಿಗೆ ಹದೀಸ್‌ಗಳ ಬಗ್ಗೆ ವಿಶಿಷ್ಟ ಆಸಕ್ತಿ ಇತ್ತು. ಅವರು ಹದೀಸಿನ ಪ್ರಾರಂಭಿಕ ಶಿಕ್ಷಣ ಬಹಳ ಅಭಿರುಚಿಯಿಂದ ಮುಹ್ತರಮ್ ಮೌಲವಿ ಖುರ್‌ಶಿದ್ ಅಹ್ಮದ್ ಸಾಹಿಬರಿಂದ ಗಳಿಸಿದರು. ಅವರ ಮನೆಯಲ್ಲಿಯೂ ದೊಡ್ಡ ಒಳ್ಳೆಯ ಗ್ರಂಥಾಲಯವಿತ್ತು. ಅವರು ಅನೇಕ ಅಲಭ್ಯ ಗ್ರಂಥಗಳನ್ನು ತಮ್ಮ ಗ್ರಂಥಾಲಯದಲ್ಲಿ ಇರಿಸಿದ್ದರು. ಅವರಿಗೆ ಓದುವ ಬಹಳ ಅಭಿರುಚಿ ಇತ್ತು. ಯಾವುದಾದರೂ ವಿದ್ಯಾರ್ಥಿ ಯಾವುದಾದರೂ ವಿಭಾಗದ ಬಗ್ಗೆ ಮಾರ್ಗದರ್ಶನ ಪಡೆಯಲು ಆಗಮಿಸಿದರೆ ಅವರು ಬಹಳ ಉತ್ತಮ ಮಾಹಿತಿಗಳನ್ನು ನೀಡುತ್ತಿದ್ದರು. ಹದೀಸುಗಳ ಮೂಲ ಗ್ರಂಥಗಳ ಸೆಟ್‌ಗಳು ಸಹ ಅವರ ಬಳಿ ಇತ್ತು. ಅವರು ಅವುಗಳನ್ನು ವಿವಿಧ ಸ್ಥಳಗಳಿಂದ ಸಂಗ್ರಹಿಸಿದ್ದರು.

1955ರಲ್ಲಿ ಅವರು ಝಿಂದಗಿ ವಕ್ಫ್ ಮಾಡಿದಾಗ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ಹೇಳಿದರು: ವಕ್ಫ್ ಮಾಡಬೇಕೆಂಬ ಆವಶ್ಯಕತೆ ನಾನು ಜಮಾಅತಿನ ಮುಂದಿರಿಸಿದಾಗ ನನ್ನ ಬಳಿಗೆ ಮೂರು ಅಪೇಕ್ಷೆಗಳು ಬಂದುವು. ಅವುಗಳಲ್ಲಿ ಒಂದು ನನ್ನ ಮೊಮ್ಮಗ ಮಿರ್ಝಾ ಅನಸ್ ಅಹ್ಮದ್‌ನದಾಗಿದೆ. ಅವನು ನನ್ನ ಪುತ್ರ ಮಿರ್ಝಾ ನಾಸಿರ್ ಅಹ್ಮದ್ ಸಾಹಿಬ್‌ರ ಪುತ್ರ. ಅಲ್ಲಾಹನು ಅವನ ಸಂಕಲ್ಪ ಈಡೇರಿಸುವ ಭಾಗ್ಯ ನೀಡಲಿ. ಅನಸ್ ಅಹ್ಮದ್ ಬರೆದರು, ನನ್ನ ಇರಾದೆ ಕಾನೂನು ಶಿಕ್ಷಣ ಪಡೆದು ಅನಂತರ ಝಿಂದಗಿ ವಕ್ಫ್ ಮಾಡಬೇಕೆಂದಾಗಿತ್ತು. ಆದರೆ ಈಗ ನೀವು ಎಲ್ಲಿ ಇಚ್ಛಿಸುತ್ತೀರೋ ಅಲ್ಲಿ ನೇಮಿಸಿರಿ. ನಾನು ಎಲ್ಲ ರೀತಿಗಳಲ್ಲೂ ಸಿದ್ಧನಾಗಿದ್ದೇನೆ.

ಅಲ್ಲಾಹನು ಅವರಿಗೆ ಜಮಾಅತಿನ ವಿವಿಧ ಕಚೇರಿಗಳಲ್ಲಿ 56 ವರ್ಷಗಳ ಕಾಲ ಸೇವೆಸಲ್ಲಿಸುವ ಭಾಗ್ಯ ನೀಡಿದನು. ಅವರು ಮೊತ್ತಮೊದಲು ತಅ್‌ಲೀಮುಲ್ ಇಸ್ಲಾಮ್ ಕಾಲೇಜಿನಲ್ಲಿ ಲೆಕ್ಚರರ್ ಆಗಿ ನೇಮಿಸಲ್ಪಟ್ಟರು. 1975ರಲ್ಲಿ ನಾಯಿಬ್ ನಾಝಿರ್ ಇಸ್ಲಾಹೋ ಇರ್‌ಶಾದ್ ಆಗಿ ನೇಮಿಸಲ್ಪಟ್ಟರು. ಅನಂತರ ಎಡಿಶನಲ್ ನಾಝಿರ್ ಇಸ್ಲಾಹೋ ಇರ್‌ಶಾದ್ ಆದರು. ಅವರು ಖಲೀಫತುಲ್ ಮಸೀಹ್ ಸಾಲಿಸರ ಪ್ರೈವೇಟ್ ಸೆಕ್ರೆಟರಿ ಸಹ ಆಗಿದ್ದರು. ಜಾಮಿಅ ಅಹ್ಮದಿಯಾದ ಎಡ್‌ಮಿನಿಸ್ಟ್ರೇಟರ್ ಆಗಿ ಸೇವೆ ಸಲ್ಲಿಸಿದ್ದರು. ಕೆಲವು ವರ್ಷ ನಾಝಿರ್ ತಅ್‌ಲೀಮ್ ಸಹ ಆಗಿದ್ದರು. ನಾಯಿಬ್ ನಾಝಿರ್ ದೀವಾನ್ ಆಗಿ ಸಹ ಕೆಲಸ ಮಾಡಿದ್ದರು. ಈಗ ತಹ್‌ರೀಕ್ ಜದೀದ್‌ನಲ್ಲಿ ವಕೀಲುತ್ತಸ್‌ನೀಫ್ ಆಗಿ ಸೇವೆ ಸಲ್ಲಿಸುತ್ತಿದ್ದರು. 1997ರಲ್ಲಿ ಅವರು ನಿವೃತ್ತರಾದರೂ ಅವರು ತನ್ನ ಕೊನೆಯ ಉಸಿರಿನ ತನಕ ಜಮಾಅತಿಗೆ ಸೇವೆ ಸಲ್ಲಿಸುತ್ತಿದ್ದರು. ಖುದ್ದಾಮುಲ್ ಅಹ್ಮದಿಯಾ, ಅನ್‌ಸಾರುಲ್ಲಾಹ್ ಮರ್‌ಕಝಿಯ ಮೊದಲಾದವುಗಳಲ್ಲಿ ವಿವಿಧ ರೀತಿಗಳಲ್ಲಿ ಸೇವೆಸಲ್ಲಿಸುವ ಭಾಗ್ಯ ಪಡೆದಿದ್ದರು. ಅವರು ಬರಾಹೀನೆ ಅಹ್ಮದಿಯಾ ಮತ್ತು ಮಹ್‌ಮೂದ್ ಕೆ ಆಮೀನ್‌ಗಳ ಇಂಗ್ಲೀಷ್ ಭಾಷಾಂತರ ಮಾಡಿದ್ದರು. ಅವುಗಳು ಪ್ರಕಟವಾಗಿವೆ. ಈಗ ಅವರು ಸುರ್ಮ ಚಶ್ಮ ಆರ್ಯಾ, ಇಝಾಲೆ ಔಹಾಮ್ ಮತ್ತು ದುರ್ರೆ ಸಮೀನ್ ಗ್ರಂಥಗಳ ಇಂಗ್ಲಿಷ್ ಭಾಷಾಂತರವನ್ನು ಪರಿಶೀಲಿಸುತ್ತಿದ್ದರು.

ನಾಸಿರ್ ಫೌಂಡೇಶನ್ ವತಿಯಿಂದ ನಮ್ಮ ಶಾಲೆಗಳನ್ನು ಪ್ರಾರಂಭಿಸಲಾಗಿವೆ. ಅವರು ಅದರ ಚೇರ್‌ಮೇನ್ ಆಗಿದ್ದರು. ಅವರು ಮಜ್ಲಿಸೆ ಇಫ್ತಾದ ಸದಸ್ಯರೂ ಆಗಿದ್ದರು. ನೂರ್ ಫೌಂಡೇಶನ್ ಬೋರ್ಡಿನ ಸದಸ್ಯರಾಗಿದ್ದರು. ಹದೀಸುಗಳನ್ನು ಜಮಾಅತ್ ವತಿಯಿಂದ ಪ್ರಕಟಿಸಲು ನೂರ್ ಫೌಂಡೇಶನ್ ಸ್ಥಾಪಿಸಲಾಗಿತ್ತು. ಹದೀಸುಗಳನ್ನು ಭಾಷಾಂತರಿಸುವುದು ಮತ್ತು ಟಿಪ್ಪಣಿಗಳನ್ನು ಬರೆಯುವುದು ಅದರ ಉದ್ದೇಶವಾಗಿತ್ತು. ಅವರು ಮುಸ್‌ನದ್ ಅಹ್ಮದ್ ಬಿನ್ ಹಂಬಲ್ ಹದೀಸ್ ಗ್ರಂಥದ ಭಾಷಾಂತರದಲ್ಲಿ ನಿರತರಾಗಿದ್ದರು. ಅವರ ಅಳಿಯ ಮಿರ್ಝಾ ವಹೀದ್ ಅಹ್ಮದ್ ಸಾಹಿಬ್ ಬರೆಯುತ್ತಾರೆ: ಒಮ್ಮೆ ನಾನು ಬುಖಾರ ಮತ್ತು ಸಮರ್‌ಖಂಡ್‌ಗೆ ಪ್ರವಾಸ ಹೋಗುತ್ತಿದ್ದಾಗ ಮಿರ್ಝಾ

ಅನಸ್ ಅಹ್ಮದ್ ಸಾಹಿಬ್ ನನ್ನೊಂದಿಗೆ ಹೇಳಿದರು: ನೀವು ಅಲ್ಲಿಗೆ ಹೋದಾಗ ಇಮಾಮ್ ಬುಖಾರಿಯವರ ಗೋರಿಯನ್ನು ಸಂದರ್ಶಿಸಿ ನನ್ನ ಸಲಾಮ್ ಹೇಳಿ ನನ್ನ ಕಡೆಯಿಂದಲೂ ಪ್ರಾರ್ಥಿಸಬೇಕು. ಇಮಾಮ್ ಬುಖಾರಿಯವರು ಹರ್ಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನುಡಿಮುತ್ತುಗಳನ್ನು ಮತ್ತು ಅವರಿಗೆ ಸಂಬಂಧಿಸಿದ ಘಟನೆಗಳ ಖಜಾನೆಯನ್ನು ಸಂಗ್ರಹಿಸಿ ನಮಗೆ ತಲಪಿಸಿದ್ದಾರೆ. ಆದುದರಿಂದ ಅವರಿಗೋಸ್ಕರ ಪ್ರಾರ್ಥಿಸುವ ಮತ್ತು ಅವರಿಗೆ ಸಲಾಮ್ ತಲಪಿಸುವ ಹಕ್ಕನ್ನು ಅವರು ಹೊಂದಿದ್ದಾರೆ.

ಡಾಕ್ಟರ್ ನೂರೀ ಸಾಹಿಬ್ ಬರೆಯುತ್ತಾರೆ: ಅವರಿಗೆ ನೀಡಲಾಗುತ್ತಿದ್ದ ಕೆಲಸವನ್ನು ಅವರು ಉತ್ಸಾಹಭರಿತರಾಗಿ ಈಡೇರಿಸುತ್ತಿದ್ದರು. ಅತ್ಯಂತ ನಿಸ್ವಾರ್ಥತೆಯಿಂದ ಲಕ್ಷ್ಯನೀಡಿ ಕಷ್ಟಪಟ್ಟು ಕೆಲಸ ಮಾಡುತ್ತಿದ್ದರು. ಅವರು ಬಲಹೀನರೂ ರೋಗಿಯೂ ಆಗಿದ್ದಾಗ ಸಹ ಅವರು ಹಲವು ಗಂಟೆಗಳ ಕಾಲ ಲ್ಯಾಪ್‌ಟೋಪ್ ಬಳಸಿ ಹರ್ಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಗ್ರಂಥಗಳನ್ನು ಭಾಷಾಂತರ ಮಾಡುತ್ತಿದ್ದರು. ಖಲೀಫರು ನನಗೆ ವಹಿಸಿಕೊಟ್ಟ ಕೆಲಸ ಅಲ್ಲಾಹನ ಸಹಾಯದಿಂದ ಪೂರ್ಣವಾಗಿ ಮಾಡಬೇಕೆಂಬುದು ನನ್ನ ಅಭಿಲಾಷೆಯಾಗಿದೆ ಎಂದು ಅವರು ಆಗಾಗ ಹೇಳುತ್ತಿದ್ದರು. ಅವರು ಹರ್ಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತು ವಿವಿಧ ಖಲೀಫರಿಗೆ ಸಂಬಂಧಿಸಿದ ಘಟನೆಗಳನ್ನು ಎಷ್ಟು ಉದ್ವೇಗಭರಿತರಾಗಿ ಮತ್ತು ಅತ್ಯಂತ ಮನೋಹರವಾಗಿ ವಿವರಿಸುತ್ತಿದ್ದರೆಂದರೆ ಅವು ಆಲಿಸುವವರ ಹೃದಯಗಳನ್ನು ಆಕರ್ಷಿಸುತ್ತಿದ್ದವು. ಅವರು ಘಟನೆಗಳನ್ನು ವಿವರಿಸುವಾಗ ಅವರ ಕಣ್ಣುಗಳು ಅಶ್ರುಭರಿತವಾಗುತ್ತಿದ್ದುವು. ಅವರ ಸ್ವರ ಭಾವೋದ್ವೇಗಭರಿತವಾಗುತ್ತಿತ್ತು. ಪ್ರತಿಯೊಂದು ಕಷ್ಟದ ಸಂದರ್ಭದಲ್ಲಿ ಅವರು ಯಾವಾಗಲೂ ಸಹನೆಯಿಂದಲೂ ಧೈರ್ಯದಿಂದಲೂ ವರ್ತಿಸಿದರು. ಅವರು ಪ್ರತಿಯೊಂದು ಕೊರತೆಯನ್ನು ಧೈರ್ಯದಿಂದ ಸಹಿಸುತ್ತಿದ್ದರು. ಅವರಿಗೆ ರೋಗದ ಕಾರಣ ಚಾ ಕುಡಿಯಲು ಗ್ಲಾಸು ಎತ್ತಲಾಗುತ್ತಿರಲಿಲ್ಲ. ಹಾಸಿಗೆಯಲ್ಲಿ ಮಗ್ಗಲು ಬದಲಿಸಲೂ ಸಾಧ್ಯವಾಗುತ್ತಿರಲಿಲ್ಲ. ಹೀಗಿದ್ದರೂ ಅವರು ತಮ್ಮ ಕೆಲಸ ಮುಂದುವರಿಸಿದರು. ಅವರು ಬಹಳ ನಿಸ್ವಾರ್ಥತೆಯಿಂದ ತಮ್ಮ ಹೊಣೆಗಾರಿಕೆಗಳನ್ನು ನಿಭಾಯಿಸಿದರು. ಯಾವುದೇ ಆಕ್ಷೇಪಕ್ಕೆ ಅವಕಾಶ ನೀಡಲಿಲ್ಲ. ಅವರು ಅಲ್ಲಾಹನ ಇಚ್ಛೆಗೆ ವಿಧೇಯರಾಗಿದ್ದರು.

ಮೀರ್ ದಾಊದ್ ಅಹ್ಮದ್ ಸಾಹಿಬ್ ಮರ್‌ಹೂಮ್ ಅವರ ಪುತ್ರಿ ನುದ್‌ರತ್ ಹೇಳುತ್ತಾರೆ: ನಾನು ನನ್ನ ಮಗಳ ವಿವಾಹದ ವ್ಯವಸ್ಥೆಗಳ ಬಗ್ಗೆ ಪರಿಶೋಧಿಸಲು ವಿವಾಹದ ಮಾರ್ಕಿಗೆ (ಡೇರೆಗೆ) ಹೋದಾಗ ಅಲ್ಲಿ ಸಹೋದರ ಅನಸ್ ಅಹ್ಮದ್ ನನಗಿಂತ ಮೊದಲೇ ಹೋಗಿ ಕುಳಿತಿದ್ದರು. ಅವರು ಅಳುತ್ತಿದ್ದರು. ನಾನು ಗಾಬರಿಗೊಂಡು ಅವರು ಅಷ್ಟು ಬೇಗ ಅಲ್ಲಿಗೆ ಬಂದುದೇಕೆಂದು ಯೋಚಿಸಿದೆ. ಅವರು ನನ್ನನ್ನು ನೋಡಿ ಹೇಳಿದರು: ಈ ದಿನ ನಿನ್ನ ತಂದೆಯವರ ಬಹಳ ನೆನಪಾಗುತ್ತಿತ್ತು. ನಾನು ಇಲ್ಲಿಗೆ ಬಂದು ನಿನಗೋಸ್ಕರ ಪ್ರಾರ್ಥಿಸುತ್ತಿದ್ದೆ.

ಅವರ ಸಹೋದರ ಪುತ್ರ ಆಮಿರ್ ಅಹ್ಮದ್ ಬರೆಯುತ್ತಾರೆ: ಅವರು ಸುಖ ದುಃಖಗಳ ಸಮಯದಲ್ಲಿ ಒಬ್ಬ ಪ್ರೀತಿಸುವ ತಂದೆಯ ಹಾಗಿದ್ದರು. ಪ್ರತಿಯೊಂದು ಮನೆಯಲ್ಲಿ ಉಚ್ಚ ನೀಚ ಭಾವನೆಗಳು ಇರುತ್ತವೆ. ಆದರೆ ಅವರು ಏನೂ ಆಗಿಲ್ಲ ಎಂಬಂತೆ ಕ್ಷಮಿಸುತ್ತಿದ್ದರು. ತನ್ನ ಉಪದೇಶದ ಕಾರಣದಿಂದ ಯಾರಿಗಾದರೂ ದುಃಖವಾಗಿದೆ ಎಂದು ತಿಳಿದರೆ ಅವರು ಮಾಡಿದ ಉಪದೇಶ ಒಳ್ಳೆಯದಾಗಿದ್ದರೂ ಸ್ವತಃ ಕ್ಷಮೆಯನ್ನು ಯಾಚಿಸುತ್ತಿದ್ದರು. ಎಡಿಶನಲ್ ವಕೀಲುತ್ತಸ್‌ನೀಫ್ ಮುನೀರುದ್ದೀನ್ ಶಮ್ಸ್ ಸಾಹಿಬ್ ಹೇಳುತ್ತಾರೆ: ನಾವು ಅವರನ್ನು ಯಾವಾಗಲೂ ಸಹಾನುಭೂತಿ ಭರಿತರೂ ವಾತ್ಸಲ್ಯಮಯರಾಗಿಯೂ ಕಂಡೆವು. ಅವರು ಯಾವಾಗಲೂ ಹೇಳುತ್ತಿದ್ದರು: ಇನ್ನಷ್ಟು ಕೆಲಸ ಕೊಡಿರಿ. ನಾನು ರೋಗಿಯಾಗಿರುವಾಗ ಎಷ್ಟು ಹೆಚ್ಚು ಕೆಲಸ ಮಾಡಿದರೂ ಉತ್ತಮವೇ ಆಗಿದೆ.

ಅವರಿಗೆ ಖಿಲಾಫತ್‌ನೊಂದಿಗೆ ಬಹಳ ನಿಷ್ಠೆ ಇತ್ತು. ಹರ್ಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಗ್ರಂಥಗಳ ಇಂಗ್ಲೀಷ್ ಭಾಷಾಂತರ ಕೆಲಸದಲ್ಲಿ ಅವರು ಪ್ರಶಂಸಾರ್ಹ ಸೇವೆ ಸಲ್ಲಿಸಿದ್ದಾರೆ. ಅವರು ದೊಡ್ಡ ವಿದ್ವಾಂಸರಾಗಿದ್ದರು. ಅವರ ಜ್ಞಾನ ಬಹಳ ಗಾಢವಾಗಿತ್ತು. ಈಗ ನಮ್ಮ ಜಮಾಅತ್ ಅದರಿಂದ ವಂಚಿತವಾಗಿದೆ. ಅಲ್ಲಾಹನು ಇನ್ನಷ್ಟು ಹೆಚ್ಚು ವಿದ್ವಾಂಸರನ್ನು ಸೃಷ್ಟಿಸಲಿ. ಪ್ರತಿಯೊಬ್ಬರು ಹೀಗೆ ಬರೆದಿದ್ದಾರೆ: ಅವರು ಮುಬಲ್ಲಿಗರಿಗೆ ಬಹಳ ಗೌರವ ನೀಡುತ್ತಿದ್ದರು. ಅವರಿಗೆ ಜ್ಞಾನ ಸಂಬಂಧವಾದ ಮಾರ್ಗದರ್ಶನ ನೀಡುತ್ತಿದ್ದರು.

ಹಾಫಿಝ್ ಮುಝಫ್ಫರ್ ಅಹ್ಮದ್ ಸಾಹಿಬ್ ಹೇಳುತ್ತಾರೆ: ಮಿಯಾಂ ಸಾಹಿಬರು ವಿವಿಧ ಗುಣಗಳ ಒಡೆಯರಾಗಿದ್ದರು. ದೇವ ಭಯ, ದೇವನ ಬಗ್ಗೆ ಪ್ರೀತಿ, ಪವಿತ್ರ ಖುರ್‌ಆನಿನ ಬಗ್ಗೆ ಪ್ರೇಮ ಹರ್ಝ್‌ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಗ್ಗೆ ಪ್ರೇಮ, ಸರಳತೆ, ಆದರ ಭಾವ, ದಯೆ, ವಾತ್ಸಲ್ಯ ಮೊದಲಾದುವು ಅವರ ಎದ್ದು ಕಾಣುವ ಗುಣಗಳಾಗಿದ್ದುವು. ಹುಖೂಖುಲ್ಲಾಹ್ ಜೊತೆಗೆ ಹುಖೂಖುಲ್ ಇಬಾದ್ ಬಗ್ಗೆ ಲಕ್ಷ್ಯ ನೀಡುತ್ತಿದ್ದರು. ಬಡವರ ಮತ್ತು ನಿರ್ಗತಿಕರ ಬಗ್ಗೆ ಬಹಳ ಸಹಾನುಭೂತಿ ಇತ್ತು. ಯಾರಾದರೂ ಏನಾದರೂ ಅವಶ್ಯಪಟ್ಟರೆ ಬರಿಗೈಯಲ್ಲಿ ಕಳುಹಿಸುತ್ತಿರಲಿಲ್ಲ. ಅವರು ಒಬ್ಬ ಜ್ಞಾನ ಸಂಪನ್ನರಾಗಿದ್ದರು. ಅವರಿಗೆ ಜ್ಞಾನಾರ್ಜನೆ ಬಗ್ಗೆ ವಿಶಿಷ್ಟ ಆಸಕ್ತಿ ಇತ್ತು. ಅದಕ್ಕೋಸ್ಕರ ಬಹಳ ಕಷ್ಟಪಟ್ಟರು ಪರಿಶ್ರಮ ಮಾಡಿದರು. ಅವರು ಹರ್ಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಗ್ರಂಥಗಳನ್ನು ಹದಿನೈದು – ಹದಿನಾರು ವರ್ಷ ಪ್ರಾಯದಲ್ಲಿ ಓದಿ ಮುಗಿಸಿದ್ದರು. ಹದೀಸು ಗ್ರಂಥಗಳ ಬಹಳ ಉತ್ತಮ ಮತ್ತು ಬೆಲೆಬಾಳುವ ಸಂಗ್ರಹವನ್ನು ಬಹಳ ಹಣ ಖರ್ಚು ಮಾಡಿ ತಮ್ಮ ಲೈಬ್ರರಿಯಲ್ಲಿ ಸಂಗ್ರಹಿಸಿದ್ದರು. ಅದರಲ್ಲಿ ಅನೇಕ ಅಪೂರ್ವವಾದ ಪ್ರಯೋಜನಕರ ಗ್ರಂಥಗಳಿವೆ. ಈ ರೀತಿ ಅವರ ಲೈಬ್ರರಿ ಅಪ್ರತಿಮವಾಗಿದೆ. ಅವರಿಗೆ ಹದೀಸು ಬಗ್ಗೆ ಬಹಳ ಆಸಕ್ತಿ ಇರುವುದರಿಂದ ಇಲ್ಮುರ್ರಿಜಾಲ್ (ಹದೀಸು ನಿವೇದಕರ ಚರಿತ್ರೆ) ಇಲ್ಮು ಉಸೂಲೆ ಹದೀಸ್ (ಹದೀಸ್ ನಿದಾನಶಾಸ್ತ್ರ) ಬಗ್ಗೆ ಗ್ರಂಥಗಳನ್ನು ಸಹ ಅವರು ಜಮಾಯಿಸಿದ್ದರು. ಹದೀಸಿನ ಬಗ್ಗೆ ಅವರ ಪ್ರೀತಿಯ ಒಂದು ಸುಂದರ ದೃಶ್ಯ ರಮಝಾನ್ ತಿಂಗಳಲ್ಲಿ ಅವರು ನೀಡುತ್ತಿದ್ದ

ದರ್ಸೇ ಹದೀಸ್ ಮೂಲಕ ಪ್ರಕಟವಾಗುತ್ತಿತ್ತು. ಅವರು ಬಹಳ ಕಷ್ಟಪಟ್ಟು ಸಿದ್ಧತೆಗಳನ್ನು ನಡೆಸಿ ಈ ದರ್ಸ್ ನೀಡುತ್ತಿದ್ದರು. ಅವು ಹೆಚ್ಚಾಗಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೀವಿತಕ್ಕೆ ಸಂಬಂಧಿಸಿರುತ್ತಿತ್ತು. ಅವರು ಅದರ ಬಗ್ಗೆ ಬಹಳ ಅಪೂರ್ವ ಮತ್ತು ಮೌಲ್ಯಭರಿತ ಮಾಹಿತಿಗಳನ್ನು ಸಂಗ್ರಹಿಸಿ ವಿವರಿಸುತ್ತಿದ್ದರು. ರಬ್ವದ ಜಲ್ಸ ಸಾಲಾನದಲ್ಲಿ ಸಹ ಅವರು ಅನೇಕ ವರ್ಷ ಭಾಷಣಗಳನ್ನು ಮಾಡುತ್ತಿದ್ದರು.

ಡಾಕ್ಟರ್ ಇಫ್ತಿಖಾರ್ ಸಾಹಿಬ್ ಲಂಡನ್‌ನಿಂದ ಬರೆಯುತ್ತಾರೆ: ಅವರು ವಾಸ್ತವಿಕವಾಗಿ ವಾಕಿಫೆ ಝಿಂದಗಿ ಆಗಿದ್ದರು. ಅವರು ತನ್ನ ಕಚೇರಿಗೆ ಆಗಮಿಸುವುದನ್ನು ನಿಲ್ಲಿಸಲಿಲ್ಲ. ಕೊನೆಯ ಶ್ವಾಸದ ತನಕ ಭಾಷಾಂತರ ಮತ್ತು ಪ್ರಕಟಣೆಯ ಕಾರ್ಯದಲ್ಲಿ ನಿರತರಾಗಿದ್ದರು. ಅವರು ಭಾಷಾಂತರವನ್ನು ಬಹಳ ಶ್ರದ್ಧೆಯಿಂದ ನಿರ್ವಹಿಸುತ್ತಿದ್ದರು. ಅನುಯೋಜ್ಯವಾದ ನುಡಿಗಟ್ಟನ್ನು ಹುಡುಕಲು ಕೆಲವು ಸಾರಿ ಅನೇಕ ದಿನಗಳನ್ನು ಬಳಸುತ್ತಿದ್ದರು. ಅವರ ಅನುಸರಣೆಯ ಮಟ್ಟ ಸಹ ಬಹಳ ಉನ್ನತವಾಗಿತ್ತು. ಖಾಲಿದ್ ಸಾಹಿಬ್ ರಶ್ಯನ್ ಡೆಸ್ಕ್, ಲಂಡನ್ ಬರೆಯುತ್ತಾರೆ: ಮಿಯಾಂ ಸಾಹಿಬರ ವ್ಯಕ್ತಿತ್ವ ನನ್ನ ಮನಸ್ಸಿಗೆ ಬರುವಾಗ ಅದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಹದೀಸ್, **ಉತ್‌ಲಿಬುಲ್ ಇಲ್ಮ ಮಿನಲ್ ಮಹ್‌ದಿ ಇಲಲ್ಲಹ್‌ದ್** (ತೊಟ್ಟಿಲಿನಿಂದ ಮಯ್ಯಿತ್ ಮಂಚದ ತನಕ ವಿದ್ಯೆಯನ್ನು ಕಲಿತುಕೊಳ್ಳು) ಎಂಬುದರ ಪ್ರಯೋಗದ ಚಿತ್ರವಾಗಿದೆ ಎಂದು ತೋರುತ್ತದೆ. ಅವರಿಗೆ ವಿವಿಧ ಜ್ಞಾನಗಳನ್ನು ಕಲಿಯಲು ಬಹಳ ಆಸಕ್ತಿ ಇತ್ತು. ಯಾವುದಾದರೂ ಹೊಸ ವಿಷಯ ತಿಳಿಯಲು ಯಾವುದಾದರೂ ಹೊಸದಾದುದನ್ನು ಕಲಿಯಲು ಸಂದರ್ಭ ಲಭಿಸಿದರೆ ಅದನ್ನು ವ್ಯರ್ಥಗೊಳಿಸುತ್ತಿರಲಿಲ್ಲ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಹದೀಸು ಮತ್ತು ಹದೀಸಿಗೆ ಸಂಬಂಧಿಸಿದ ವಿಷಯಗಳು ಅವರಿಗೆ ಬಹಳ ಇಷ್ಟಕರ ವಿಷಯವಾಗಿದ್ದವು.

ಅಮೇರಿಕದ ಮುಬಲ್ಲಿಗ್ ಶಮ್‌ಶಾದ್ ಸಾಹಿಬ್ ಬರೆಯುತ್ತಾರೆ: ಮುರಬ್ಬಿಗಳ ಮೀಟಿಂಗ್‌ಗಳಲ್ಲಿ ಅವರೊಳಗೆ ತಬ್ಲೀಗಿನ ಭಾವನೆ ಸ್ಪುರಿಸಲು ಬಹಳ ಪ್ರಯತ್ನಿಸುತ್ತಿದ್ದರು. ಅವರಿಗೆ ಓದುವ ಬಗ್ಗೆ ಬಹಳ ಆಸಕ್ತಿ ಇತ್ತು. ಅವರು ಮುರಬ್ಬಿಗಳೊಂದಿಗೆ ಓದುವ ಬಗ್ಗೆ ಪದೇ ಪದೇ ಗಮನ ಹರಿಸುತ್ತಿದ್ದರು. ಅವರು ತಮ್ಮ ಕಚೇರಿಯಲ್ಲಿ ಗ್ರಂಥಗಳ ರಾಶಿಯನ್ನು ಇರಿಸಿದ್ದರು. ಅವರು ಬುಖಾರಿ ಶರೀಫನ್ನು ಬಹಳ ಹೆಚ್ಚು ಸಾರಿ ಅಧ್ಯಯನ ಮಾಡುತ್ತಿದ್ದರು. ಅಲ್ಲಿಗೆ ಬಂದು ಹೋಗುವ ಮುರಬ್ಬಿಗಳೊಂದಿಗೆ ಜ್ಞಾನ ಸಂಬಂಧವಾದ ಚರ್ಚೆ ಮಾಡುತ್ತಿದ್ದರು. ಘಾನದ ಮುಬಲ್ಲಿಗ್ ಶಾಹಿದ್ ಮಹ್ಮೂದ್ ಸಾಹಿಬ್ ಬರೆಯುತ್ತಾರೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬಗ್ಗೆ ಪ್ರೀತಿ, ಖಿಲಾಫತ್ ಬಗ್ಗೆ ಪ್ರೀತಿ ಮತ್ತು ಅನುಸರಣೆ ಅವರಲ್ಲಿ ಚೆನ್ನಾಗಿ ತುಂಬಿಸಲ್ಪಟ್ಟಿತ್ತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಹೆಸರು ಉಚ್ಚರಿಸುವಾಗ ಅವರು ಬಹಳ ಸಾರಿ ಅಶ್ರುಭರಿತರಾಗುತ್ತಿದ್ದರು.

ರಶ್ಯನ್ ಡೆಸ್ಕಿನ ಉದ್ಯೋಗಿ ಶೇಖ್ ನಸೀರ್ ಸಾಹಿಬ್ ಹೇಳುತ್ತಾರೆ: ನಾನು ಮಿಯಾಂ ಸಾಹಿಬರೊಂದಿಗೆ ಹದಿನಾರು ವರ್ಷ ಕಾಲ ವಕಾಲತೆ ಇಶಾಅತ್‌ನಲ್ಲಿ ಕೆಲಸ ಮಾಡುತ್ತಿದ್ದೆ. ಅವರಿಂದ ನಾನು ಬಹಳ ವಿಷಯಗಳನ್ನು ಕಲಿತೆನು. ಯಾವಾಗಲೂ ಒಬ್ಬ ವಾತ್ಸಲ್ಯಮಯ ಸ್ನೇಹಿತನಂತೆ ನನ್ನೊಂದಿಗೆ ವರ್ತಿಸುತ್ತಿದ್ದರು. ನಾನು ಅವರ ಅಧೀನ ನೌಕರನೆಂಬ ಭಾವನೆ ಹುಟ್ಟಲು ಅವರು ಬಿಡುತ್ತಿರಲಿಲ್ಲ. ನನ್ನ ತಂದೆ ತಾಯಂದಿರು ಜೀವಿಸಿಲ್ಲ ಎಂಬ ಭಾವನೆ ನನ್ನಲ್ಲಿ ತಲೆದೋರಿದಾಗ ಅವರು ಯಾವಾಗಲೂ ಹೇಳುತ್ತಿದ್ದರು ನನ್ನನ್ನು ಅವರ ಸ್ಥಾನದಲ್ಲಿ ಭಾವಿಸು ಎಂದು.

ಇಶಾಅತ್ ಉದ್ಯೋಗಿ ಮುಹಮ್ಮದುದ್ದೀನ್ ಭಟ್ಟಿ ಸಾಹಿಬ್ ಹೇಳುತ್ತಾರೆ: ಮಿಯಾಂ ಸಾಹಿಬರು ಕಚೇರಿಯ ಉದ್ಯೋಗಿಗಳೊಂದಿಗೆ ಯಾವಾಗಲೂ ಆದರ ಭಾವದಿಂದ ವರ್ತಿಸುತ್ತಿದ್ದರು. ಅವರು ಯಾವುದಾದರೂ ಕೆಲಸದ ಬಗ್ಗೆ ತನ್ನ ಬಳಿಗೆ ಕರೆಸಿದಾಗ ಕುರ್ಚಿಯಲ್ಲಿ ಕುಳಿತುಕೊಳ್ಳಿರಿ ಎಂದು ಹೇಳಿ ಮಾತನಾಡುತ್ತಿದ್ದರು. ಅವರಿಗೆ ಯಾವುದಾದರೂ ಉದ್ಯೋಗಿಯ ಮೇಲೆ ಸಿಟ್ಟುಂಟಾದರೆ ಅನಂತರ ಬೇಗನೆ ಪ್ರೀತಿಯಿಂದ ವರ್ತಿಸುತ್ತಿದ್ದರು ಮತ್ತು ಕೆಲವು ಸಾರಿ ಕ್ಷಮಿಸಲು ಹೇಳುತ್ತಿದ್ದರು. ಘಾನದ ಮುರಬ್ಬಿ, ಇಹ್‌ಸಾನುಲ್ಲಾ ಸಾಹಿಬ್ ಹೇಳುತ್ತಾರೆ: ನಾನು ಅವರ ಅಧೀನದಲ್ಲಿ ವಕಾಲತೆ ಇಶಾಅತ್‌ನಲ್ಲಿ ಒಂಬತ್ತು ವರ್ಷ ಕೆಲಸ ಮಾಡಿದೆ. ಅವರು ಖಿಲಾಫತ್ ಬಗ್ಗೆ ಪ್ರೀತಿ ಭರಿತ ವ್ಯಕ್ತಿಯಾಗಿದ್ದರು. ಒಮ್ಮೆ ಅವರು ನನ್ನೊಂದಿಗೆ ಹೇಳಿದರು: ನಾನು ಹುಝೂರರಿಗೆ ಫ್ಯಾಕ್ಸ್ ಮಾಡಲು ಬರೆಯುತ್ತಿದ್ದೇನೆ. ಈ ಕೆಲಸ ಈಗಲೇ ಮಾಡಬೇಕಾಗಿದೆ. ಅವರು ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಎಂದು ಬರೆದು ಆನಂದ ಪರವಶರಾಗಿ ಆ ಶಬ್ದಗಳ ಮೇಲೆ ಕೆಲವು ನಿಮಿಷ ದೃಷ್ಟಿ ಇರಿಸಿದರು.

ವಕಾಲತೆ ಇಶಾಅತ್ ಮುರಬ್ಬಿ ಆಸಿಫ್ ಉವೈಸ್ ಸಾಹಿಬ್ ಬರೆಯುತ್ತಾರೆ: ಕೆಲವು ತಿಂಗಳ ಹಿಂದೆ ನಾನು ವಕಾಲತೆ ಇಶಾಅತ್‌ನಲ್ಲಿ ನೇಮಿಸಲ್ಪಟ್ಟೆನು. ಈ ಕೆಲವು ತಿಂಗಳು ನನ್ನ ಜೀವಿತದ ಸ್ಮರಣೀಯ ಕಾಲವಾಗಿದೆ. ಮಿಯಾಂ ಸಾಹಿಬರು ಪ್ರತಿಯೊಂದು ಸಂದರ್ಭದಲ್ಲಿ ಬಹಳ ವಾತ್ಸಲ್ಯಪೂರ್ವಕವಾಗಿ ನನ್ನೊಂದಿಗೆ ವರ್ತಿಸುತ್ತಿದ್ದರು. ನನ್ನ ಮತ್ತು ಅವರ ಪ್ರಾಯದ ವ್ಯತ್ಯಾಸ ಕನಿಷ್ಠ ಐವತ್ತೈದು ವರ್ಷಗಳಿಗಿಂತ ಹೆಚ್ಚಿಗೆ ಇರಬಹುದು. ಆದರೆ ಅವರೊಂದಿಗಿರುವಾಗ ಈ ವ್ಯತ್ಯಾಸ ನಾಮ ಮಾತ್ರವಾಗಿತ್ತು. ನಮ್ಮ ಮಾತುಕತೆ ಬಹಳ ಭವ್ಯವಾಗಿರುತ್ತಿತ್ತು. ಪರಿಸರವನ್ನು ಸಂತೋಷದಾಯಕವನ್ನಾಗಿ ಮಾಡಲು ಕೆಲವು ಸಾರಿ ತಮಾಷೆ ಸಹ ಹೇಳುತ್ತಿದ್ದರು. ಮುಸ್‌ನದ್ ಅಹ್ಮದ್ ಬಿನ್ ಹಂಬಲಿನ ಅವರ ಭಾಷಾಂತರಕ್ಕೆ ಸಂಬಂಧಿಸಿದ ಕೆಲಸ ನನಗೆ ವಹಿಸಿಕೊಡಲಾಗಿತ್ತು. ಈ ಪ್ರಾಯದಲ್ಲಿ ಮತ್ತು ಆರೋಗ್ಯ ಅತ್ಯಂತ ಕೆಟ್ಟುಹೋದ ಸಂದರ್ಭದಲ್ಲಿ ಸಹ ತನ್ನ ಕೆಲಸ ಜಾರಿಯಲ್ಲಿರಿಸುವ ಧೈರ್ಯ ಅಸಾಮಾನ್ಯವಾಗಿ ಅವರಲ್ಲಿತ್ತು. ಕೆಲಸ ಪೂರ್ಣವಾಗದಿರುವ ನಿರಾಶೆಯ ಯೋಚನೆ ಸಹ ಅವರಿಗಿರಲಿಲ್ಲ.

ರಬ್ವದ ಜಾಮಿಅ ಅಹ್ಮದಿಯಾದ ವಿದ್ಯಾರ್ಥಿ ಮುಹಮ್ಮದ್ ಕಾಶಿಫ್ ಹೇಳುತ್ತಾರೆ: ಅಹ್ಮದಿಯಾ ಜಮಾಅತಿನ ಖಲೀಫರ ಪ್ರೈವೇಟ್ ಸೆಕ್ರೆಟರಿಗಳಿಗೆ

ಸಂಬಂಧಿಸಿದ ನನ್ನ ಸಂಶೋಧನಾತ್ಮಕ ಪ್ರಬಂಧಕ್ಕೆ ಸಂಬಂಧಿಸಿ ಕಳೆದ ಕೆಲವು ತಿಂಗಳಲ್ಲಿ ನಾನು ಅನೇಕ ಸಾರಿ ಅವರ ಬಳಿಗೆ ಹೋಗಿದ್ದೆ. ಅಲ್‌ಹಮ್ದುಲಿಲ್ಲಾಹ್, ಅವರು ಅತ್ಯಂತ ಪ್ರೀತಿಯಿಂದ ನನಗೆ ಅಮೂಲ್ಯ ಸಮಯವನ್ನು ನೀಡಿದರು. ಅವರು ರೋಗಿಯಾಗಿದ್ದು ಕೂಡ ದೀರ್ಘವಾದ ಸಂದರ್ಶನ ನೀಡಿದರು. ಒಮ್ಮೆ ಅವರು ಉದ್ವೇಗ ಭರಿತ ಶಬ್ದದೊಂದಿಗೆ ಹೇಳಿದರು, ಮನುಷ್ಯನ ಪ್ರಯತ್ನ ಮತ್ತು ದುಡಿಮೆ ಏನೂ ಅಲ್ಲ. ಇದು ನನ್ನ ಜೀವಿತದ ಸಾರಾಂಶವಾಗಿದೆ. ಏನೆಲ್ಲಾ ಆಗಿದೆಯೋ ಅದು ಅಲ್ಲಾಹನ ಅನುಗ್ರಹದಿಂದ ಮತ್ತು ಖಿಲಾಫತ್‌ನೊಂದಿಗೆ ಜೋಡಿಸಿಕೊಂಡಾಗಿದೆ.

ರಬ್ವದಿಂದ ಆಸಿಫ್ ಅಹ್ಮದ್ ಝುಫರ್ ಹೇಳುತ್ತಾರೆ: ಅವರು ನಿಧನ ಹೊಂದುವುದಕ್ಕೆ ಸ್ವಲ್ಪ ಕಾಲದ ಮೊದಲು ತಾಹಿರ್ ಇನ್‌ಸ್ಟಿಟ್ಯೂಟ್‌ನಲ್ಲಿ ದಾಖಲಿಸಲ್ಪಟ್ಟಿದ್ದರು. ನಾನು ಅವರನ್ನು ಸಂದರ್ಶಿಸಲು ಹೋಗಿದ್ದೆ. ಅವರು ಬಹಳ ಕಷ್ಟಪಟ್ಟು ಸ್ವತಃ ತನ್ನ ಮಾಸ್ಕ್ ಕಳಚಿದರು ಮತ್ತು ಮಾತನಾಡಲು ತೊಡಗಿದರು. ನಾನು ಹೇಳಿದೆ, ಅಲ್ಲಾಹನು ಅನುಗ್ರಹ ನೀಡುವನು ಇನ್‌ಶಾಅಲ್ಲಾಹ್. ಅವರು ಹೇಳಿದರು: ಅಲ್ಲಾಹನು ತನ್ನ ಬಳಿಗೆ ಕರೆದುಕೊಳ್ಳುವುದು ಸಹ ಒಂದು ಅನುಗ್ರಹವೇ ಆಗಿದೆ. ನಾನು ಅವರ ಮಾತುಗಳನ್ನು ಆಲಿಸಿ ಆಶ್ಚರ್ಯಗೊಂಡೆನು. ಅವರು ಈ ಸ್ಥಿತಿಯಲ್ಲಿಯೂ ಅಲ್ಲಾಹನ ಮೇಲೆ ಭರವಸೆ ಹೊಂದಿದ್ದಾರೆ ಮತ್ತು ಮೃತ್ಯು ಬಗ್ಗೆ ಯಾವುದೇ ಚಿಂತೆ ಇಲ್ಲದವರಾಗಿದ್ದಾರೆ ಎಂದು.

ಖಿಲಾಫತ್‌ನೊಂದಿಗೆ ಸಂಬಂಧದ ಬಗ್ಗೆ ವಿವಿಧ ಜನರು ಬರೆದುದರಲ್ಲಿ ಅತಿಶಯೋಕ್ತಿಗಳಿಲ್ಲ. ಅವರ ಸಂಬಂಧ ಅದಕ್ಕಿಂತಲೂ ಮಿಗಿಲಾಗಿತ್ತು. ಅವರು ತನ್ನ ಪ್ರತಿಯೊಂದು ಕೆಲಸದ ಮೂಲಕ ಮತ್ತು ನಡತೆಯ ಮೂಲಕ ಅವರು ಈ ಸಂಬಂಧವನ್ನು ಪ್ರಕಟಿಸುತ್ತಿದ್ದರು. ಖಲೀಫತುಲ್ ಮಸೀಹ್ ರಾಬಿಅ್ ನನ್ನನ್ನು ಅಮೀರ್ ಮಖಾಮೀ ಮತ್ತು ನಾಯಿಬ್ ಅಲ್‌ಲಾ ಆಗಿ ನೇಮಿಸಿದಾಗ ಸಹ ಖಿಲಾಫತ್‌ನೊಂದಿಗೆ ಅವರ ಅನುಸರಣೆಯ ಕಾರಣದಿಂದ ಅವರು ಪರಿಪೂರ್ಣವಾಗಿ ಅಮೀರ್‌ರನ್ನು ಅನುಸರಿಸಿದರು ಮತ್ತು ಬಹಳ ಆದರ ಭಾವದಿಂದ ವರ್ತಿಸಿದರು. ನಾನು ಅವರಿಗಿಂತ ಹದಿಮೂರು ಹದಿನಾಲ್ಕು ವರ್ಷ ಕಿರಿಯ ಪ್ರಾಯದವನಾಗಿದ್ದರೂ ಅವರು ಪರಿಪೂರ್ಣ ಅನುಸರಣೆ ತೋರಿಸಿದರು. ನಾನು ಖಲೀಫ ಆದ ನಂತರ ಸಹ ಪರಿಪೂರ್ಣ ಅನುಸರಣೆಯ ಮಾದರಿ ತೋರಿಸಿದರು.

ಅಲ್ಲಾಹನು ಅವರಿಗೆ ರಹಮ್ ಮತ್ತು ಮಗ್‌ಫಿರತ್ ದಯಪಾಲಿಸಲಿ. ಅಲ್ಲಾಹನಿಂದ ಅನುಗ್ರಹ ಪಡೆಯುವ ಯಾವ ಆಶೆಯನ್ನು ಅವರು ಪ್ರಕಟಿಸಿದರೋ ಆ ಆಶೆಯನ್ನು ಅವರಿಗೆ ಈಡೇರಿಸಿಕೊಡುವವನಾಗಲಿ. ಅವನ ಪ್ರೀತಿಗೆ ಪಾತ್ರರಾದವರೊಂದಿಗೆ ಅವರಿಗೆ ಸ್ಥಳ ನೀಡುವವನಾಗಲಿ. ಅವರ ಮಕ್ಕಳು ಸಹ ಖಿಲಾಫತ್‌ನೊಂದಿಗೆ ನಿಷ್ಠಾವಂತರಾಗುವಂತೆ ಅಲ್ಲಾಹನು ಮಾಡಲಿ. ಮುಕರ್ರಮ್ ಮಿರ್ಝಾ ಗುಲಾಮ್ ಅಹ್ಮದ್ ಸಾಹಿಬ್ ನಿಧನ ಹೊಂದಿದಾಗ ಅವರು ಒಂದು ಸ್ವಪ್ನ ಕಂಡಿದ್ದರು. ಅವರು ಹೇಳುತ್ತಾರೆ: ಮಿಯಾಂ ಮಿರ್ಝಾ ಗುಲಾಮ್ ಅಹ್ಮದ್ ಸಾಹಿಬ್ ನಿಧನ ಹೊಂದಿದಾಗ ನಾನೊಂದು ಸ್ವಪ್ನ ಕಂಡೆನು. ಸಹೋದರ ಖುರ್‌ಶೀದ್ ಮತ್ತು ಗುಲಾಮ್ ಅಹ್ಮದ್ ಅಲ್ಲಾಹನ ಸಮೀಪಕ್ಕೆ ಹೋದಾಗ ಅವರಿಬ್ಬರೂ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನೂ ಭೇಟಿಯಾದರು. ಆಗ ನನ್ನ ಹೃದಯದಲ್ಲಿ ಹೀಗೆ ಆಶೆ ಉಂಟಾಯಿತು, ನನಗೆ ಸಹ ಇಂತಹ ಭೇಟಿ ಲಭಿಸಲಿ ಎಂದು. ನಾನು ಹೇಳಿದೆ: ಓ ಅಲ್ಲಾಹ್, ನೀನು ನನ್ನನ್ನು ಸಹ ನಿನ್ನ ಸನ್ನಿಧಿಗೆ ಕರೆದುಕೋ. ಆಗ ಅಲ್ಲಾಹನು ಹೇಳಿದನು: ನೀನು ಮುಂದೆ ಬಾ.

ಈ ರೀತಿ ಅಲ್ಲಾಹನು ಅವರಿಗೆ ತನ್ನ ಸಾಮೀಪ್ಯ ನೀಡಿರುವನು. ಅಲ್ಲಾಹನು ಅವರಿಗೆ ತನ್ನ ರಹಮ್ ಮತ್ತು ಮಗ್‌ಫಿರತ್ ಬಗ್ಗೆ ಸಮಾಚಾರ ಮೊದಲೇ ನೀಡಿರುವನು. ಅಲ್ಲಾಹನು ಅವರ ಪದವಿಗಳನ್ನು ಉನ್ನತ ಗೊಳಿಸುತ್ತಾ ಇರಲಿ. ಅವರ ಮಕ್ಕಳು ಸಹ ಒಳ್ಳೆಯವರೂ ಸಾತ್ವಿಕರೂ ಆಗುವವರಾಗಲಿ – ಆಮೀನ್.

*****

***Friday Sermon delivered by Hadrath Khaleefatul Masih Al Khamis(atba)***

*At,Masjid Baithul Futhuh London, UK. On 21-12-2018.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim |***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon